# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 833 |
| ಸದಸ್ಯರ ಹೆಸರು | : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 13.07.2023 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಎಫ್.ಆರ್.ಎಲ್–519.6 ರಿಂದ 5.24 ಕ್ಕೆ ಹೆಚ್ಚಿಸುವುದರಿಂದ ಮುಳುಗಡೆ ಯಾಗುವ ಜಮೀನು ಎಷ್ಟು; | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿಯಲ್ಲಿ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ 519.600 ಮೀಟರಿಂದ 524.256 ಮೀಟರವರೆಗೆ 188 ಗ್ರಾಮಗಳ 75,573 ಎಕರೆ ಜಮೀನು ಮುಳುಗಡೆ ಹೊಂದಲಿದೆ. |
| ಆ) | ಈಗಾಗಲೇ ಈ ಯೋಜನೆಯಡಿಯಲ್ಲಿ ಎತ್ತರಿಸಿದಾಗ ಮುಳುಗಡೆಯಾದ ಜಮೀನುಗಳಿಗೆ ನೀಡಿದ ಪರಿಹಾರ ಎಷ್ಟು; | ಈಗಾಗಲೇ 21 ಗ್ರಾಮಗಳ 2542 ಎಕರೆ 24 ಗುಂಟೆ ಕ್ಷೇತ್ರವನ್ನು ಭೂಸ್ವಾಧೀನಪಡಿಸಿಕೊಂಡು ರೂ.419.50 ಕೋಟಿಗಳ ಪರಿಹಾರ ವಿತರಿಸಲಾಗಿದೆ. |
| ಇ) | ಯಾವ ಯಾವ ಗ್ರಾಮಗಳಲ್ಲಿ ಭೂ ಪರಿಹಾರ ಧನವನ್ನು ವಿತರಿಸಲಾಗಿದೆ; (ಕ್ಷೇತ್ರವಾರು ಮಾಹಿತಿ ನೀಡುವುದು) | ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ. |
| ಈ) | ಪ್ರತಿ ಎಕರೆಗೆ ಎಷ್ಟು ಪರಿಹಾರ ಧನವನ್ನು ನಿಗಧಿಪಡಿಸಲಾಗಿದೆ; | ಸರ್ಕಾರದ ಆದೇಶ ದಿನಾಂಕ 25.01.2023ರಲ್ಲಿ ಹೊರಡಿಸಿರುವ ಒಪ್ಪಂದದ ಐತೀರ್ಪಿನ (Consent Award) ಆದೇಶದನ್ವಯ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ. 20.00 ಲಕ್ಷ ಮತ್ತು ನೀರಾವರಿ ಜಮೀನಿಗೆ ಪ್ರತಿ ಎಕರೆಗೆ ರೂ.24.00 ಲಕ್ಷಗಳಂತೆ ಪರಿಹಾರ ಧನ ನಿಗಧಿಪಡಿಸಲಾಗಿದೆ. |
| ಉ) | ಎಫ್.ಆರ್.ಎಲ್–519.6 ರಿಂದ 5.24 ಮೀಟರ್‌ಗೆ ಎತ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ; (ಮಾಹಿತಿ ನೀಡುವುದು) | ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್. 519.600 ಮೀ.ನಿಂದ ಆರ್.ಎಲ್.524.256ಮೀ.ಗೆ ಎತ್ತರಿಸುವುದರಿಂದ ಹೆಚ್ಚುವರಿಯಾಗಿ 100 ಟಿ.ಎಂ.ಸಿ. ನೀರು ಸಂಗ್ರಹಣೆಯಾಗಲಿದೆ.<br><br>ಕೃಷ್ಣಾ ನ್ಯಾಯಾಧೀಕರಣ-2ರ ತೀರ್ಪಿನನ್ವಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು ಆರ್.ಎಲ್ 519.600 ಮೀ. ನಿಂದ ಆರ್.ಎಲ್ 524.256 ಮೀ. ಗೆ (4.656 ಮೀ.) ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ಐತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪು ಇನ್ನೂ ಅಧಿಸೂಚನೆಗೊಂಡಿರುವುದಿಲ್ಲ.<br><br>ದಿನಾಂಕ:16.09.2011ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದೆ. ಕೃಷ್ಣಾ ನ್ಯಾಯಾಧಿಕರಣ-2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಹೊರಡಿಸಲು ಎಲ್ಲಾ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಕೇಂದ್ರ ಸರ್ಕಾರದ ಜೊತೆಗೆ ಸಮನ್ವಯ ಸಾಧಿಸಲಾಗುತ್ತಿದ್ದು, ಅಧಿಸೂಚನೆ ಹೊರಡಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಜಸಂಇ 41 ಡಬ್ಲ್ಯೂಬಿಎಂ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು

ಆಲಮಟ್ಟಿ ಜಲಾಶಯದಡಿ ಎಫ್‌ಆರ್‌ಎಲ್ 524.256 ಮೀಟರ್ ಅಡಿಯಲ್ಲಿ ಒಟ್ಟು 188 ಗ್ರಾಮಗಳ ಪೈಕಿ ಭೂಸ್ವಾಧೀನಪಡಿಸಿಕೊಂಡ ಗ್ರಾಮಗಳ ವಿವರ

| ಕಛೇರಿ ಹೆಸರು | ಅ.ನಂ. | ಗ್ರಾಮದ ಹೆಸರು | ಕ್ಷೇತ್ರ | | ಐತೀರ್ಪು ಮೊತ್ತ |
|---|---|---|---|---|---|
| | | | ಎಕರೆ | ಗುಂ | |
| 1 | 2 | 3 | 4 | 5 | 6 |
| SLAO BAGALKOT | 1 | ಶೀಗಿಕೇರಿ | 29 | 8 | 4,15,44,605/- |
| | 2 | ಹೊನರಳ್ಳಿ | 58 | 22 | 8,65,79,426/- |
| | 3 | ಶಾರದಾಳ | 116 | 13 | 17,56,39,322/- |
| | 4 | ಅಂಕಲಗಿ | 210 | 13 | 29,18,20,586/- |
| | 5 | ಕಲಾದಗಿ | 137 | 29 | 17,97,92,137/- |
| | | ಕಲಾದಗಿ (ಹೆಚ್ಚುವರಿ) | 86 | 25 | 12,09,64,426/- |
| | 6 | ಹೊನ್ನಾಕಟ್ಟಿ | 59 | 31.5 | 10,55,60,653/- |
| | 7 | ಬನ್ನಿದಿನ್ನಿ | 59 | 12 | 9,56,16,974/- |
| | 8 | ನಕ್ಕರಗುಂದಿ | 148 | 37 | 15,85,84,458/- |
| | 9 | ಮಾಸ್ತಿಹಾಳ | 91 | 9 | 15,13,52,253/- |
| | 10 | ಚಿಕ್ಕಗುಳಬಾಳ | 69 | 22 | 12,36,34,095/- |
| | 11 | ಆನದಿನ್ನಿ | 16 | 20 | 2,89,27,004/- |
| SLAO BILAGI | 12 | ಬೀಳಗಿ | 112 | 30.5 | 13,46,68,750/- |
| SLAO JAMAKHANDI | 13 | ಬುದ್ನಿ | 65 | 26 | 11,34,22,498/- |
| | 14 | ತಿಮ್ಮಾಪೂರ | 47 | 20 | 7,84,93,758/- |
| | 15 | ಚಿಕ್ಕೂರ | 234 | 13 | 35,96,44,603/- |
| | 16 | ಆಲಗುಂಡಿ ಬಿ.ಕೆ | 190 | 23 | 30,52,56,388/- |
| | 17 | ಜಕನೂರ | 198 | 32 | 33,22,63,543/- |
| | 18 | ನಾಗನೂರ | 304 | 20 | 61,59,57,140/- |
| | 19 | ಘಂಟನೂರ | 76 | 36 | 18,02,08,281/- |
| | 20 | ಮಾಚಕನೂರ | 210 | 6 | 50,66,51,414/- |
| ASLAO ALMATTI | 21 | ಚಿಕ್ಕಗಲಗಲಿ (ಪಾಶ್ಚಾಪೂರ) | 3 | 16 | 83,88,704/- |
| | | ಒಟ್ಟು | 2542 | 24 | 4,19,49,71,018/- |

Scanned with OKEN Scanner